ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್

ತಿಲೋತ್ತಮ ಮಿಶ್ರ ಮತ್ತು ಇನ್ನೊಬ್ಬರು ವಿರುದ್ಧ ಕರ್ನಾಟಕ ಸರ್ಕಾರ*

ಕ್ರಿಮಿನಲ್ ಪುನರೀಕ್ಷಣಾಸಂಖ್ಯೆ: 1232/2015, ದಿನಾಂಕ 7 ನೇ ನವೆಂಬರ್, 2019.

ಆದೇಶ

ನ್ಯಾಯಮೂರ್ತಿ ಶ್ರೀ ಕೆ. ಸೋಮಶೇಖರ್:

2 ಮತ್ತು 4 ನೇ ಆರೋಪಿಗಳು ಎಂದರೆ ಇದರಲ್ಲಿನ ಅರ್ಜಿದಾರರು ವರದಕ್ಷಿಣೆ ನಿಷೇಧ ಅಧಿನಿಯಮ, 1961 ರ (ಇದರಲ್ಲಿ ಇನ್ನು ಮುಂದೆ ' ವ.ನಿ.ಅಧಿನಿಯಮ'ವೆಂದು ಉಲ್ಲೇಖಿಸಲಾಗಿದೆ) 3 ಮತ್ತು 4 ನೇ ಪ್ರಕರಣಗಳೊಂದಿಗೆ ಓದಲಾದ ಭಾರತ ದಂಡ ಸಂಹಿತೆಯ 304 (ಬಿ) ಮತ್ತು 498 (ಎ) ಪ್ರಕರಣಗಳ ಅಡಿಯಲ್ಲಿ ಅವರ ವಿರುದ್ಧ ಆರೋಪಿಸಲಾದ ಅಪರಾಧಗಳಿಂದ ತಮ್ಮನ್ನು ಮುಕ್ತಗೊಳಿಸುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿರುವುದಕ್ಕಾಗಿ ಅಧಿವಿಚಾರಣಾ ನ್ಯಾಯಾಲಯವುದಿನಾಂಕ: 05.09.2015 ರ ಎಸ್.ಸಿ.ಸಂಖ್ಯೆ: 1123/2014 ರಲ್ಲಿ ಹೊರಡಿಸಿದ ಅರ್ಜಿಗಳನ್ನು ತಿರಸ್ಕರಿಸಿ ಹೊರಡಿಸಿದ ಆದೇಶವನ್ನು ಪ್ರಶ್ನಿಸಿ ಈ ಕ್ರಿಮಿನಲ್ ಪುನರೀಕ್ಷಣಾ ಅಜ್ಜಿಯನ್ನು ಸಲ್ಲಿಸಿದ್ದಾರೆ.

2. ಈ ಅರ್ಜಿಯ ವಾಸ್ತವಿಕ ಸಂಗತಿಗಳು ಈ ಕೆಳಗಿನಂತಿದೆ:

ಸೌಮ್ಯ ಕರ್ (ಮೃತ) ಇವರ ವಿವಾಹವುದಿನಾಂಕ: 06.12.2013 ರಂದು ಅವರ ಸಮುದಾಯದ ಸಂಪ್ರದಾಯದಂತೆ 1 ನೇ ಆರೋಪಿಯೊಂದಿಗೆ ನಡೆದಿತ್ತು.1 ನೇ ಆರೋಪಿಯಾದ ಶ್ರೀಬತ್ಸ ಮಿಶ್ರಾನೊಂದಿಗೆ ಅವಳ ವಿವಾಹವಾದ ತರುವಾಯ ಅವಳು ಒಂದು ತಿಂಗಳು ಒರಿಸ್ಸಾದಲ್ಲಿಯೇ ಇದ್ದಳು. 2014 ರ ಫೆಬ್ರುವರಿ ತಿಂಗಳಿನಲ್ಲಿ ದಂಪತಿಗಳು ಬೆಂಗಳೂರಿಗೆ ಸ್ಥಳಾಂತರಗೊಂಡು, ಬೆಂಗಳೂರಿನ ದೇವರ ಚಿಕ್ಕನಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು.ದೂರಿನಲ್ಲಿ ಮತ್ತು ತನಿಖಾಧಿಕಾರಿಯೂ ಮಂಡಿಸಿದ ಆರೋಪ ಪಟ್ಟಿಯಲ್ಲಿನ ಹೇಳಿಕೆಯಲ್ಲಿ ಸಹ ಮೃತಳ ಪತಿಯಾದ 1 ನೇ ಆರೋಪಿಯು ಟೆಲಿಕಾಂ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದನೆಂದು ಮತ್ತು 3 ನೇ ಆರೋಪಿಯೂ ಆ್ಯಕ್ಸೆಂಚರ್ ಕಂಪನಿಯಲ್ಲಿ ಹೆಚ್.ಆರ್. ಆಗಿ ಕೆಲಸ ಮಾಡುತ್ತಿದ್ದು ಮೇಲೆ ಹೇಳಲಾದ ಬಾಡಿಗೆ ಮನೆಯಲ್ಲಿಯೇ ಅವರೊಂದಿಗೆ ವಾಸವಾಗಿರುತ್ತಾನೆ.ಮೃತ ಸೌಮ್ಯ ಕರ್ ಕೆಲಸ ಮಾಡಲು ಆಸಕ್ತಿ ಹೊಂದಿರುತ್ತಾಳೆ ಮತ್ತು ಆಕೆ ಬೆಂಗಳೂರಿನಲ್ಲಿ ಫೈನಾನ್ಸ್ ಎಕ್ಸಿಕ್ಯೂಟ್ ಆಗಿ ಕೆಲಸ ಮಾಡುತ್ತಿರುತ್ತಾಳೆ.ಆರೋಪ ಪಟ್ಟಿಯಲ್ಲಿ ಹೇಳಲಾದ 2 ನೇ ಆರೋಪಿ ತಿಲೋತ್ತಮ ಮಿಶ್ರ ಮೃತಳ ಅತ್ತೆಯಾಗಿದ್ದು, 4 ನೇ ಆರೋಪಿ ಪೂರ್ಣಿಮ ಮಿಶ್ರ ಮೃತಳ ನಾದಿನಿಯಾಗಿದ್ದಾಳೆ ಮತ್ತು ಅವರೆಲ್ಲರೂ ಒರಿಸ್ಸಾದಲ್ಲಿ ವಾಸವಾಗಿರುತ್ತಾರೆ.ದೂರುದಾರಳು ಮೃತ ಸೌಮ್ಯ ಕರ್ಳ ಸೋದರ ಸಂಬಂಧಿಯಾಗಿದ್ದು, ದೂರು ಮತ್ತು ಆರೋಪ ಪಟ್ಟಿಯ ಭಾಗದಲ್ಲಿನ ಮರಣೋತ್ತರ ವರದಿಯ ಪ್ರಕಾರ ನಿರೂಪಿಸಲಾದಂತೆ ಅವಳಿಗೆ ವಿವಾಹವಾಗಿದ್ದು, ಅವಳು ಘಟನೆ ನಡೆದ ಸ್ಥಳವಾದ ಬೆಂಗಳೂರಿನಿಂದ ಸಾಕಷ್ಟು ದೂರದ ಒರಿಸ್ಸಾದಲ್ಲಿ ತನ್ನ ಗಂಡನ ಮನೆಯಲ್ಲಿಯೇ ವಾಸವಾಗಿರುವಳು.

3. ಅರ್ಜಿದಾರರ ಪರ ಮಾನ್ಯ ನ್ಯಾಯವಾದಿ ಶ್ರೀ ರಾಜೇಂದ್ರ ಸಿ. ದೇಸಾಯಿಯವರು ಮಂಡಿಸಿದ ವಾದಾಂಶಗಳು ಹೀಗಿವೆ, ಮೃತಳ ಸೋದರ ಸಂಬಂಧಿಯೆಂದು ಹೇಳಲಾದ ಮಾಹಿತಿದಾರಳು ಸಲ್ಲಿಸಿದ ದೂರಿನ ಆಧಾರದ ಮೇಲೆ, ದೂರನ್ನು ವರದಕ್ಷಿಣೆ ನಿಷೇಧ ಅಧಿನಿಯಮದ 3 ಮತ್ತು 4 ನೇ ಪ್ರಕರಣಗಳ ಜೊತೆಗೆ ಭಾರತ ದಂಡ ಸಂಹಿತೆಯ 304 (ಬಿ) ಮತ್ತು 498 ( ಎ) ಪ್ರಕರಣಗಳ ಅಡಿಯಲ್ಲಿ ದಂಡನೀಯ ಅಪರಾಧಕ್ಕಾಗಿ ಅಪರಾಧವನ್ನು ದಾಖಲಿಸಿಕೊಳ್ಳಲಾಯಿತು.

ಹಾಗಾಗಿ ಮೃತಳ ಸೋದರ ಸಂಬಂಧಿಯೆಂದು ಹೇಳಿಕೊಂಡಿರುವ ದೂರುದಾರಳು ಹೇಳಿರುವಂತೆ ದೂರುದಾರಳು 1 ನೇ ಆರೋಪಿಯ ಮನೆಗೆ ಎಂದೂ ಬಂದಿರಲಿಲ್ಲ ಮತ್ತು ಆ ಆ ಯಾವುದೇ ಸಮಯದಲ್ಲಿ ಅವರೊಂದಿಗೆ ಸಂಪರ್ಕವನ್ನು ಇಟ್ಟುಕೊಂಡಿರಲಿಲ್ಲ.ಅಲ್ಲದೆ, ದೂರುದಾರಳು ಆರೋಪಿ ಕುಟುಂಬ ಸದಸ್ಯರಿಗೆ ಪರಿಚಿತಳೂ ಆಗಿರಲಿಲ್ಲ.ಮೃತಳು ಮತ್ತು 1 ನೇ ಆರೋಪಿಯೆಂದು ಹೇಳಲಾದ ಅವಳ ಪತಿ ಹಾಗೂ ಇತರ ಆರೋಪಿಗಳ ನಡುವೆ ನಡೆದಿದೆಯೆಂದು ಹೇಳಲಾದ ವಾಗ್ವಾದಗಳೇನು ಎಂಬುದು ಸಹ ಆಕೆಗೆ ತಿಳಿದಿಲ್ಲದಿದ್ದರೂ, ಇಡೀ ದೂರನ್ನು ಅವಳು ಆರೋಪಿತ ಅಪರಾಧದಲ್ಲಿ ಆರೋಪಿಯನ್ನು ವ್ಯವಸ್ಥಿತವಾಗಿ ಸಿಲುಕಿಸುವ ತಂತ್ರಗಾರಿಕೆಯಿಂದ ಮಾಡಿದ್ದಾಳೆ.ಹಾಗಾಗಿ 2 ನೇ ಮತ್ತು 4 ನೇ ಆರೋಪಿಗಳ ವಿರುದ್ಧ ಭಾರತ ದಂಡ ಸಂಹಿತೆಯ 498 (ಎ) ಪ್ರಕರಣದ ಅಡಿಯಲ್ಲಿನ ದಂಡನೀಯ ಅಪರಾಧವಲ್ಲದ ತನಿಖಾಧಿಕಾರಿಯು ಸಂಗ್ರಹಿಸಿರುವ ಆ ಯಾವುದೇ ಘಟನಾಂಶಗಳನ್ನು ನಿರ್ಧರಿಸುವ ಸಂಭಾವ್ಯತೆಯು ಕ್ಷೀಣವಾಗಿದ್ದಾಗ್ಯೂ ಭಾರತ ದಂಡ ಸಂಹಿತೆಯ 498 (ಎ) ಪ್ರಕರಣದ ಅಡಿಯಲ್ಲಿನ ಅಪರಾಧಗಳಿಗಾಗಿ ಮತ್ತು ವಿವಾಹವಾದ ದಿನಾಂಕದಿಂದ 7 ವರ್ಷಗಳ ಅವಧಿಯೊಳಗೆ ಮರಣ ಸಂಭವಿಸಿರುವುದರಿಂದ ಭಾರತ ದಂಡ ಸಂಹಿತೆಯ 304 (ಬಿ) ಪ್ರಕರಣದ ಅಡಿಯಲ್ಲಿನ ಅಪರಾಧಕ್ಕಾಗಿ ಪ್ರಥಮ ಮಾಹಿತಿ ವರದಿಯನ್ನು ದಾಖಲಿಸಲಾಗಿದೆಯೆಂದು ಹೇಳಲಾಗಿದೆ.ಆದರೆ, 2 ಮತ್ತು 4 ನೇ ಆರೋಪಿಗಳು ಅಪರಾಧ ನಡೆದ ಸ್ಥಳದಿಂದ ಬಹುದೂರದ ಸ್ಥಳದಲ್ಲಿ ವಾಸಿಸುತ್ತಿದ್ದರಿಂದ, ಆಪಾದಿತನ ವಿರುದ್ಧ ಹೂಡಲಾದ ಮೇಲೆ ಹೇಳಲಾದ ಅಪರಾಧಗಳಿಗೆ ಸಂಬಂಧಿಸಿದ ಅಂಶಗಳು ಇವರಿಬ್ಬರ ಸಂಬಂಧದಲ್ಲಿ ಯಾವುದೇ ಅಪರಾಧವಾಗುವುದಿಲ್ಲ.ಸದರಿ ದೂರುದಾರಳು ಮೃತಳ ಸೋದರ ಸಂಬಂಧಿಯಾಗಿರುತ್ತಾಳೆಂದು ಹೇಳಲಾಗಿದೆ ಮತ್ತು ಅವಳು ದೂರಿನಲ್ಲಿ ಹಾಗೆಯೇ ಆರೋಪ ಪಟ್ಟಿಯಲ್ಲಿ ನಿರೂಪಿಸಿರುವಂತೆ ಅಪರಾಧದ ಕೃತ್ಯವನ್ನು ನೋಡಿರುವುದಿಲ್ಲ.ಆದರೆ, ಇಡೀ ದೂರನ್ನು ವದಂತಿಗಳನ್ನಾಧರಿಸಿ ಹಾಗೂ ಮೃತಳ ಪತಿಯಾದ 1 ನೇ ಆರೋಪಿಯ ಕುಮ್ಮಕ್ಕಿನಿಂದ ಈ ಆರೋಪಿಗಳು ಸೌಮ್ಯ ಕರ್ಳ ಸಾವಿಗೆ ಕಾರಣರಾಗಿದ್ದರೆಂಬ ಆರೋಪಿತ ಅಪರಾಧಕ್ಕೆ ಸಂಬಂಧಿಸಿದಂತೆ ಭಾವಿಸಿ ನೀಡಲಾಗಿದೆ.

ಮುಂದುವರೆದು, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ದೂರಿನಲ್ಲಿ ಮತ್ತು ಆರೋಪ ಪಟ್ಟಿಯಲ್ಲಿ ಮಾಡಲಾದ ಆರೋಪಗಳು ಸಾಮಾನ್ಯ ಆರೋಪಗಳಾಗಿದ್ದು ಅವು 2 ನೇ ಮತ್ತು 4 ನೇ ಅರ್ಜಿದಾರರು/ಆರೋಪಿಗಳ ವಿರುದ್ಧ ಮಾಡಲಾದ ಅಸ್ಪಷ್ಟ ಆರೋಪಗಳಲ್ಲದೆ ಬೇರೇನಲ್ಲ.ಆರೋಪ ಪಟ್ಟಿಯಲ್ಲೂ ಸಹ ಅಪರಾಧದ ಜೊತೆ ಈ ಆರೋಪಿಗಳನ್ನು ತಳುಕು ಹಾಕಲು ಮತ್ತು ಈ ಆರೋಪಿಗಳಿಂದ ಮೃತಳು ಅನುಭವಿಸಿದ ಕಿರುಕುಳದ ಕುರಿತಂತೆಯೂ ಸಹ ಅವರ ವಿರುದ್ಧ ಆರೋಪಿಸಲಾದ ವ್ಯಕ್ತ ಕೃತ್ಯಕ್ಕೆ ಸಂಬಂಧಿಸಿದಂತೆಯೂ ಯಾವುದೇ ಸ್ಪಷ್ಟವಾದ ಸಾಕ್ಷ್ಯಾಧಾರಗಳು ಇರುವುದಿಲ್ಲ.

ಮೃತ ಸೌಮ್ಯ ಕರ್ಳ ಕುಟುಂಬ ಸದಸ್ಯರೂ ಸಹ ತನಿಖೆಯ ಸಂದರ್ಭದಲ್ಲಿ ದಾಖಲಿಸಿಕೊಳ್ಳಲಾಯಿತೆಂದು ಹೇಳಲಾದ ತಮ್ಮ ಹೇಳಿಕೆಗಳಲ್ಲಿ ಮತ್ತು ಅದರಲ್ಲಿ ಹೇಳಲಾದ ವರದಕ್ಷಿಣೆಯ ಕಿರುಕುಳವನ್ನು ನಿರೂಪಿಸಲು ಸಂಖ್ಯಾತ್ಮಕ ಪ್ರಮಾಣದಲ್ಲಿ ಸಹ ಯಾವುದೇ ಆಪಾದನೆಗಳನ್ನು ಮಾಡಿರುವುದಿಲ್ಲ.ಮೃತಳ ಸಂಬಂಧಿಕರು ತನಿಖಾ ಅವಧಿಯಲ್ಲಿ ತನಿಖಾಧಿಕಾರಿಯ ಮುಂದೆ ಹೇಳಿಕೆಗಳನ್ನು ನೀಡಿದ್ದರೂ, ಮೃತ ಸೌಮ್ಯ ಕರ್ಳ ಪತಿಯಾದ 1 ನೇ ಆರೋಪಿಯ ಮುಖಾಂತರ ನೇರವಾಗಿ ಏನನ್ನು ಮಾಡಿದರು ಎಂಬುದರ ಬಗ್ಗೆ ಏನನ್ನೂ ಹೇಳಿರುವುದಿಲ್ಲ.ಆರೋಪ ೧ ಪಟ್ಟಿಯಲ್ಲಿ ಈ ಆರೋಪಿಗಳ ವಿರುದ್ಧ ಮಾಡಲಾದ ಆರೋಪಗಳೆಲ್ಲವನ್ನೂ ಈ ಆರೋಪಿಗಳು 1 ನೇ ಆರೋಪಿಯ ತಾಯಿ ಮತ್ತು ಸಹೋದರಿಯಾಗಿರುವ ಕಾರಣ ಮಾತ್ರದಿಂದಲೇ ಆರೋಪಿತ ಅಪರಾಧದಲ್ಲಿ ಅವರನ್ನು ಸಿಕ್ಕಿಸಲು ಹೆಣೆದಂತವುಗಳಾಗಿವೆ.

ಆರೋಪಿತ ಅಪರಾಧದಲ್ಲಿ 2 ಮತ್ತು 4 ನೇ ಆರೋಪಿಗಳು ಒಟ್ಟರೆಯಾಗಿ ಮುಗ್ಧರಾಗಿರುವರು ಮತ್ತು ತನಿಖಾಧಿಕಾರಿಯು ಮಂಡಿಸಿದ ಆರೋಪ ಪಟ್ಟಿಯಲ್ಲಿ ಅವರ ವಿರುದ್ಧ ಆರೋಪಿಸಲಾದ

ಅಪರಾಧಗಳಲ್ಲಿ ಅವರು ಭಾಗಿಯಾಗಿರಲಿಲ್ಲ.2 ಮತ್ತು 4 ನೇ ಆರೋಪಿಗಳು ಖಾಯಂ ಆಗಿ ಒರಿಸ್ಸಾದಲ್ಲಿ ವಾಸಿಸುತ್ತಿದ್ದಾರೆ ಮತ್ತು ಘಟನೆ ನಡೆದ ಸ್ಥಳದಿಂದ ಇವರು ಸರಿಸುಮಾರು 2000 ಕಿ.ಮೀಟರ್‌ಗಳಷ್ಟು ದೂರದಲ್ಲಿ ವಾಸವಾಗಿರುತ್ತಾರೆ.ಬೆಂಗಳೂರು ನಗರದಲ್ಲಿ ಅಪರಾಧದ ಘಟನೆ ನಡೆದಿದೆ ಮತ್ತು ಮೃತ ಸೌಮ್ಯ ಕರ್ ಒರಿಸ್ಸಾದಲ್ಲಿ 2 ನೇ ಆರೋಪಿಯೊಂದಿಗೆ ಒಂದು ತಿಂಗಳ ಅವಧಿಗಾಗಿ ಮಾತ್ರವೇ ಇದ್ದಳೇ ಹೊರತು 4 ನೇ ಆರೋಪಿಯೊಂದಿಗೆ ಇರಲಿಲ್ಲ ಎಂಬ ಸಂಗತಿಯನ್ನು ಸ್ಪಷ್ಟಪಡಿಸುವುದು ಸೂಕ್ತ.ಮೃತಳು ಒರಿಸ್ಸಾದಲ್ಲಿ ಇದ್ದಾಗ, 2 ನೇ ಆರೋಪಿಯೂ ಅವಳನ್ನು ತನ್ನ ಸ್ವಂತ ಮಗಳಂತೆಯೇ ನೋಡಿಕೊಂಡಿರುತ್ತಾಳೆ.ಆದುದರಿಂದ, ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಆರೋಪಿತ ಅಪರಾಧಗಳಿಂದ ಮುಕ್ತಗೊಳಿಸುವಂತೆ ಕೋರಿ ಅರ್ಜಿದಾರರು/ 2 ಮತ್ತು 4 ನೇ ಆರೋಪಿಗಳು ಸಲ್ಲಿಸಿದ ಅರ್ಜಿಯನ್ನು ವಿಲೆ ಮಾಡುವಾಗ ಅಧಿವಿಚಾರಣಾ ನ್ಯಾಯಾಲಯವು ಈ ಎಲ್ಲ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡಿರುವುದಿಲ್ಲ.

2 ನೇ ಆರೋಪಿಯು ವಯಸ್ಸಾದ ಮಹಿಳೆಯಾಗಿದ್ದು, ಮೃತಳ ಅತ್ತೆಯಾಗಿರುತ್ತಾಳೆ ಮತ್ತು ಅವಳ ಕಾಲಿನ ಮೂಳೆ ಮುರಿದಿರುವುದರಿಂದ ಆ ಸ್ಥಿತಿಯಲ್ಲಿ ದೂರ ಪ್ರಯಾಣ ಮಾಡುವ ಸ್ಥಿತಿಯಲ್ಲಿಲ್ಲ.ಅಲ್ಲದೆ ಮೃತ ಸೌಮ್ಯ ಕರ್ ಅತ್ತೆಯೊಂದಿಗೆ ಅಲ್ಪ ಕಾಲ ಮಾತ್ರ ವಾಸವಾಗಿದ್ದಳು.ಆದರೆ ತನಿಖಾಧಿಕಾರಿಯು ಸಲ್ಲಿಸಿದ ಆಪಾದಿತ ಆರೋಪಪಟ್ಟಿಯಲ್ಲಿ 2 ನೇ ಆರೋಪಿಯನ್ನು ಸಿಕ್ಕಿಸಲಾಗಿದೆ.2 ನೇ ಆರೋಪಿಯು ಮೃತಳಿಂದಾಗಲೀ ಅಥವಾ ಅವಳ ಪೋಷಕರಿಂದಾಗಲೀ ವರದಕ್ಷಿಣೆಯ ಬೇಡಿಕೆಯನ್ನು ಎಂದಿಗೂ ಇಟ್ಟಿರುವುದಿಲ್ಲ.ಹಾಗಿದ್ದರೂ, ತನಿಖಾಧಿಕಾರಿ ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ ಅಧಿನಿಯಮದ 3 ಮತ್ತು 4 ನೇ ಪ್ರಕರಣದ ಅಡಿಯಲ್ಲಿನ ಅಪರಾಧಗಳು ಆಪಾದಿತರ ಮೂಲಕ ಮೃತಳು ಅನುಭವಿಸಿದ ದೈಹಿಕ ಮತ್ತು ಮಾನಸಿಕ ಕಿರುಕುಳಕ್ಕೆ ಸಂಬಂಧಿಸಿದಂತೆ 1 ನೇ ಆರೋಪಿಯೊಂದಿಗೆ ಮೃತ ಸೌಮ್ಯ ಕರ್‌ಳ ವಿವಾಹವಾದ ದಿನಾಂಕದಿಂದ 7 ವರ್ಷದ ಒಳಗಾಗಿ ಅವಳು ಸಾವನ್ನಪ್ಪಿರುವ ಕಾರಣಕ್ಕಾಗಿ ಭಾರತ ದಂಡ ಸಂಹಿತೆಯ 498 (   ಎ) ಪ್ರಕರಣದ ಅಡಿಯಲ್ಲಿ ಆರೋಪಗಳನ್ನು ಹೊರಿಸಲಾಗಿದೆ.

ತನಿಖಾಧಿಕಾರಿಯು, ತನಿಖೆಯ ಅವಧಿಯಲ್ಲಿ ಆರೋಪಿಗಳು ತಪ್ಪಿತಸ್ಥರೆಂದು ರುಜುವಾತುಪಡಿಸುವ ಸಲುವಾಗಿ ಸಾಕ್ಷ್ಯದ ರೂಪದಲ್ಲಿ ಯಾವುದೇ ನಿರ್ದಿಷ್ಟ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸಿರುವುದಿಲ್ಲ.ಆದರೆ 4 ನೇ ಆರೋಪಿಯೂ ಒರಿಸ್ಸಾದಲ್ಲಿರುವ ತನ್ನ ಪೋಷಕರ ಮನೆಯಿಂದ 300 ಕಿ.ಮೀ. ದೂರದಲ್ಲಿ ತನ್ನ ಪತಿಯಿಂದ ಪ್ರತ್ಯೇಕವಾಗಿ 14 ವರ್ಷ ವಯಸ್ಸಿನ ತನ್ನ ಮಗನೊಂದಿಗೆ ವಾಸಿಸುತ್ತಿದ್ದಾಳೆ ಮತ್ತು 4 ನೇ ಆರೋಪಿಯು ಎಂದಿಗೂ ತನ್ನ ಪೋಷಕರ ಕುಟುಂಬದ ವಿಷಯದಲ್ಲಿ ಅದರಲ್ಲೂ ಮೃತ ಸೌಮ್ಯ ಕರ್ ತನ್ನ ಪತಿಯೊಂದಿಗೆ ವಾಸಿಸುತ್ತಿರುವ ಮನೆಯಲ್ಲಿ ಯಾವುದರಲ್ಲೂ ಹಸ್ತಕ್ಷೇಪ ಮಾಡಿರುವುದಿಲ್ಲ.ಆದರೂ ತನಿಖಾಧಿಕಾರಿಯು ಸಲ್ಲಿಸಿದ ಆರೋಪ ಪಟ್ಟಿಯಲ್ಲಿ 4 ನೇ ಆರೋಪಿಯನ್ನು ಸಿಕ್ಕಿಸಲಾಗಿದೆ.

ಕೊನೆಯದಾಗಿ, ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು, ಮೃತ ಸೌಮ್ಯ ಕರ್ಳ ದೂರದ ಸೋದರಸಂಬಂಧಿಯೂ ದೂರು ನೀಡಿರುತ್ತಾಳೆ ಮತ್ತು ಆಕೆಗೆ ಆರೋಪಿಗಳ ಕುಟುಂಬ ಸದಸ್ಯರ ವಿಷಯವು ಏನೇನೂ ತಿಳಿದಿರುವುದಿಲ್ಲ ಎಂದು ನಿವೇದಿಸಿರುವರು.ಆಕೆ ಮೈಕೋ ಲೇಔಟ್ ಪೊಲೀಸ್ ಠಾಣೆಯಲ್ಲಿ ದಾಖಲಿಸಿದ ದೂರಿನಲ್ಲಿ ಘಟನೆಯನ್ನು ಮಾತ್ರವೇ ನಿರೂಪಿಸಿರುತ್ತಾಳೆ ಹಾಗೂ ದೂರಿನಲ್ಲಿ 2 ಮತ್ತು 4 ನೇ ಆರೋಪಿಗಳ ವಿರುದ್ಧ ಯಾವುದೇ ನಿರ್ದಿಷ್ಟ ಆರೋಪಗಳನ್ನು ಮಾಡಿರುವುದಿಲ್ಲ.3 ನೇ ಆರೋಪಿಯು ಎಸ್.ಸಿ.ಸಂಖ್ಯೆ:1123/2014 ರಲ್ಲಿ ವಿಚಾರಣೆಯನ್ನು ಎದುರಿಸುತ್ತಿರುವನೆಂದು ಹೇಳಲಾಗಿದೆ.ಆದರೆ ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ ನಂತರ, 2 ಮತ್ತು 4 ನೇ ಆರೋಪಿಗಳ ವಿರುದ್ಧ ನಿರ್ದಿಷ್ಟ ನೇರಕೃತ್ಯದ ಆರೋಪಗಳಾವುವು ಇಲ್ಲದಿದ್ದಾಗ್ಯೂ, ವಿವಿಧ ಆಧಾರಗಳ ಮೇಲೆ ತಮ್ಮ ಮೇಲೆ ಹೊರಿಸಲಾದ ಆರೋಪಗಳಿಂದ ತಮ್ಮನ್ನು ಮುಕ್ತಗೊಳಿಸುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಅರ್ಜಿ

ಸಲ್ಲಿಸಿದ್ದಾರೆ.ಅರ್ಜಿದಾರರ/ 2 ನೇ ಮತ್ತು 4 ನೇ ಆರೋಪಿಗಳ ಪರವಾಗಿ ಮಾನ್ಯ ನ್ಯಾಯವಾದಿಗಳು ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸುವಂತೆ ಮತ್ತು ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ತಮ್ಮ ಅರ್ಜಿಯನ್ನು ವಜಾಗೊಳಿಸಿರುವುದಕ್ಕಾಗಿ ಅಧಿವಿಚಾರಣಾ ನ್ಯಾಯಾಲಯವು ಎಸ್.ಸಿ.ಸಂಖ್ಯೆ: 1123/2014 ರಲ್ಲಿ ಹೊರಡಿಸಿದ ಆದೇಶವನ್ನು ರದ್ದುಪಡಿಸುವಂತೆ ಕೋರಿ ಈ ಎಲ್ಲ ವಾದಗಳನ್ನು ಮಂಡಿಸಿದ್ದಾರೆ.ಈ ಎಲ್ಲ ಕಾರಣದಿಂದಾಗಿ ತಾವು ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಿ ಆರೋಪಿತ ಅಪರಾಧಗಳಿಂದ ತಮ್ಮನ್ನು ಮುಕ್ತಗೊಳಿಸಬೇಕೆಂದು ಅವರು ಪ್ರಾರ್ಥಿಸಿರುವರು.

4. ದೂರಿನಲ್ಲಿ ಮಾಡಲಾದ ಆರೋಪಗಳು ಮತ್ತು ತನಿಖಾಧಿಕಾರಿಯು ಸಲ್ಲಿಸಿದ ಆರೋಪ ಪಟ್ಟಿಯ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ದೃಷ್ಟಿಕೋನದ ಮೇಲೆ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶಗಳಿಗೆ ವಿರುದ್ಧವಾಗಿ ಸರ್ಕಾರದ ಮಾನ್ಯ ಹೆಚ್ಸಿಜಿಪಿಯವರು ನಿವೇದಿಸಿದ ವಾದಾಂಶಗಳು ಹೀಗಿವೆ:ಆರೋಪಿಗಳ ವಿರುದ್ಧ ಒಮ್ಮೆ ಆರೋಪ ಪಟ್ಟಿಯನ್ನು ಸಲ್ಲಿಸಿದರೆ, ತನಿಖಾಧಿಕಾರಿಯು ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಅಧಿಕಾರ ಹೊಂದಿರುತ್ತಾನೆಂದು ಅರ್ಥ. ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯ ಸಾಕ್ಷಿದಾರರ ಹೇಳಿಕೆಗಳನ್ನು ದಾಖಲಿಸಿ ಜಪ್ತಿ ಮಹಜರನ್ನು ಸಹ ನಡೆಸಲಾಯಿತು.ಅಲ್ಲದೆ, ಪ್ರಸ್ತುತ ಮೊಕದ್ದಮೆಯಲ್ಲಿ, ಮೃತ ಸೌಮ್ಯ ಕರ್ಳ ಸಾವು ಅವಳ ಮದುವೆಯಾದ ದಿನಾಂಕದಿಂದ 7 ವರ್ಷದ ಅವಧಿಯೊಳಗೆ ಅವಳ ಗಂಡನ ಮನೆಯಲ್ಲಿ ಸಂಭವಿಸಿದೆ.ಅಧಿವಿಚಾರಣಾ ನ್ಯಾಯಾಲಯವು ಆರೋಪ ಪಟ್ಟಿಯನ್ನು ಪರ್ಯಾಲೋಚಿಸಿದರೂ, ಆರೋಪಿಗಳು ತಮ್ಮನ್ನು ಆರೋಪದಿಂದ ಮುಕ್ತಗೊಳಿಸುವಂತೆ ಕೋರಿ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಅರ್ಜಿಯನ್ನು ಪರಿಗಣಿಸಲು ಇದೊಂದು ಲಘು ವಿಚಾರಣೆಯ ಮೊಕದ್ದಮೆಯಾಗಿರುವುದಿಲ್ಲ.ಆರೋಪಿಗಳ ವಿರುದ್ಧ ಆರೋಪ ಪಟ್ಟಿಯನ್ನು ಮಂಡಿಸಲಾಗಿದೆ ಮತ್ತು ಅವರ ವಿರುದ್ಧ ಅಧಿವಿಚಾರಣೆ ನಡೆಸಲು ಸಾಕಷ್ಟು ಎ ಸಾಕ್ಷ್ಯಾಧಾರಗಳು ಇರುವುದರಿಂದ ಈ ಮೊಕದ್ದಮೆಯ ಪ್ರಕ್ರಿಯೆ ಮುಂದುವರೆಸಲು ಇಷ್ಟು ಸಾಕು. ಈ ಪ್ರಸ್ತುತ ಮೊಕದ್ದಮೆಯಲ್ಲಿ 2 ಮತ್ತು 4 ನೇ ಆರೋಪಿಗಳು ಮೃತ ಸೌಮ್ಯ ಕರ್ಳ ಅತ್ತೆ ಹಾಗೂ ನಾದಿನಿಯರಲ್ಲದೆ ಬೇರಾರೂ ಅಲ್ಲ ಮತ್ತು ಇವರಿಬ್ಬರು ಮೃತಳ ಗಂಡನಾದ 1 ನೇ ಆರೋಪಿಯ ಮುಖಾಂತರ ಮೃತ 79 908 ಸೌಮ್ಯ ಕರ್ಳಿಗೆ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡುತ್ತಿದ್ದರು.ಮೃತ ದೇಹದ ಶವ ಪಂಚನಾಮೆ ಪ್ರಕ್ರಿಯೆ ನಡೆದ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರವು, ಪಂಚಸಾಕ್ಷಿದಾರರ ಸಮ್ಮುಖದಲ್ಲಿ ಮಹಜರು ನಡೆಸಿರುತ್ತದೆ.ಆ ಸಂದರ್ಭದಲ್ಲಿ 2 ನೇ ಆರೋಪಿಯಾದ ತಿಲೋತ್ತಮ ಮಿಶ್ರ ಮೃತ ಸೌಮ್ಯ ಕರ್ಳ ಅತ್ತೆ ಎಂದು ಮತ್ತು 4 ನೇ ಆರೋಪಿಯಾದ ಪೂರ್ಣಿಮ ಮಿಶ್ರ ಮೃತಳ ನಾದಿನಿ ಎಂಬ ವಿಷಯ ಬಹಿರಂಗವಾಗಿರುತ್ತದೆ ಮತ್ತು ಇವರಿಬ್ಬರು ಮೃತಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡಿರುವ ವಿಚಾರವು ಹೊರಬಂದಿರುತ್ತದೆ.ಅಲ್ಲದೆ ಮೃತಳು ಮರಣಪತ್ರವನ್ನು ಬರೆದಿಟ್ಟಿದ್ದು, ಅದನ್ನು ತನಿಖೆಯ ಅವಧಿಯಲ್ಲಿ ತನಿಖಾಧಿಕಾರಿಯು ಜಪ್ತಿ ಮಾಡಿ ಆರೋಪ ಪಟ್ಟಿ ಸಲ್ಲಿಸಿರುತ್ತಾರೆ.ಅದರಲ್ಲಿ ಮೃತಳು ಆರೋಪಿಗಳಿಂದ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ಹಿಂಸೆಯನ್ನು ಅನುಭವಿಸಿದ್ದುದಾಗಿ ಬರೆದಿರುತ್ತಾಳೆ.ಸ್ವತಃ ತಾನೇ ತಾರಸಿ ಫ್ಯಾನಿಗೆ ಕಾಟನ್ ಸೀರೆಯ ತುಂಡಿನಿಂದ ಕುತ್ತಿಗೆಗೆ ನೇಣು ಬಿಗಿದುಕೊಂಡ ಕಾರಣದಿಂದ ಅವಳು ಪಿ.ಎಫ್.ಗೆ ಒಳಪಟ್ಟು ಸಾವನ್ನಪ್ಪಿರುತ್ತಾಳೆ.ಸರ್ಕಾರದ ಪರ ಮಾನ್ಯ ಹೆಚ್ಸಿಜಿಪಿ ಅವರು ಈ ಎಲ್ಲ ವಾದಾಂಶಗಳನ್ನು ನಿವೇದಿಸಿ, 2 ಮತ್ತು 4 ನೇ ಆರೋಪಿಗಳು ದಾಖಲಿಸಿದ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ವಜಾಗೊಳಿಸಬೇಕೆಂದು ಪ್ರಾರ್ಥಿಸಿರುವರು.

5. ಮೇಲೆ ಹೇಳಲಾದ ಅರ್ಜಿದಾರರ ಪರ ಮಾನ್ಯ ನ್ಯಾಯವಾದಿಗಳು ಮಂಡಿಸಿದ ವಾದಾಂಶಗಳ ಹಿನ್ನೆಲೆಯಲ್ಲಿ ಹಾಗೆಯೇ ಸರ್ಕಾರದ ಪರವಾಗಿ ಮಾನ್ಯ ಹೆಚ್ಸಿಜಿಪಿಯವರು ಮಾಡಿದ ಪ್ರತಿವಾದದ ಹಿನ್ನೆಲೆಯಲ್ಲಿ, ಮೃತ ಸೌಮ್ಯ ಕರ್ಳ ಸೋದರ ಸಂಬಂಧಿ ನೀಡಿದ ದೂರಿನ ಆಧಾರದ ಮೇಲೆ, ಮೈಕೋ ಲೇಔಟ್ ಪೊಲೀಸ್ ಠಾಣೆಯವರು ಗೃಹ ಸಂಬಂಧಿ ಹಿಂಸೆಯಿಂದ ಮಹಿಳೆಯರ ಸಂರಕ್ಷಣೆ

ಅಧಿನಿಯಮದ 3 ಮತ್ತು 4 ನೇ ಪ್ರಕರಣವನ್ನು ಓದಿಕೊಳ್ಳುವುದರೊಂದಿಗೆ ದಂಡ D ಪ್ರಕ್ರಿಯಾ ಸಂಹಿತೆಯ 498 (ಎ) ಮತ್ತು 304 (ಬಿ) ಪ್ರಕರಣಗಳ ಅಡಿಯಲ್ಲಿನ ದಂಡನೀಯ ಅಪರಾಧಕ್ಕಾಗಿ ಕ್ರಿಮಿನಲ್ ಮೊಕದ್ದಮೆಸಂಖ್ಯೆ: 423/2014 ರಲ್ಲಿ ದೂರನ್ನು ದಾಖಲಿಸಲಾಯಿತು.ಅದರಲ್ಲಿರುವಂತೆ, ಮೃತ ಸೌಮ್ಯ ಕರ್ಳ ಮದುವೆಯೂ ದಿನಾಂಕ:6.12.2013 ರಂದು 1 ನೇ ಆರೋಪಿಯೊಂದಿಗೆ ಅವರ ಸಂಪ್ರದಾಯದಂತೆ ನಡೆದಿರುತ್ತದೆ.ಮದುವೆಯ ಸಂದರ್ಭದಲ್ಲಿ ಮೃತಳ ತಂದೆ-ತಾಯಿ ಚಿನ್ನ ಮತ್ತು ಬೆಳ್ಳಿಯ ಆಭರಣಗಳ ರೂಪದಲ್ಲಿ ಹಾಗೂ ನಗದು ರೂಪದಲ್ಲಿ ಕೊಡುವ ಮೂಲಕ ವೈಭವದಿಂದ ವಿವಾಹವನ್ನು ನಡೆಸಿಕೊಟ್ಟಿದ್ದರು.ವಿವಾಹದ ತರುವಾಯ, ಮೃತ ಸೌಮ್ಯ ಕರ್ಳು ತನ್ನ ಗಂಡನ ಮನೆಯಲ್ಲಿಯೇ ವಾಸವಾಗಿದ್ದಳು.ಆ ಸಂದರ್ಭದಲ್ಲಿ ಉಳಿದ ಆರೋಪಿಗಳು ಅವಳ ತಂದೆ-ತಾಯಿಯ ಮನೆಯಿಂದ ಮತ್ತಷ್ಟು ಹೆಚ್ಚಿನ ವರದಕ್ಷಿಣೆ ತರಬೇಕೆಂದು ಬಲವಂತಪಡಿಸುತ್ತಿದ್ದರು.2 ನೇ ಆರೋಪಿಯೂ ಮೃತಳಿಗೆ ಈ ಸಂಬಂಧದಲ್ಲಿ ಕಿರುಕುಳ ನೀಡಿರುವುದಷ್ಟೇ ಅಲ್ಲದೆ, ಮೃತಳನ್ನು ಮನೆಯಿಂದ ಹೊರಹಾಕಿದ್ದಳೆಂದು ಹೇಳಲಾಗುತ್ತದೆ.2014 ನೇ ಫೆಬ್ರುವರಿ ತಿಂಗಳಲ್ಲಿ, ಮೃತ ಸೌಮ್ಯ ಕರ್ಳ ಮತ್ತು 1 ನೇ ಆರೋಪಿಯಾಗಿರುವ ಅವಳ ಪತಿಯೂ ಬೆಂಗಳೂರಿಗೆ ಹಿಂತಿರುಗಿ, ಬೆಂಗಳೂರಿನ ಮೈಕೋ ಲೇಔಟ್ನಲ್ಲಿರುವ ಬಾಡಿಗೆ ಮನೆಯಲ್ಲಿ ನೆಲೆಸಿದ್ದರು.ಅಲ್ಲೂ ಸಹ 1 ಮತ್ತು 3 ನೇ ಆರೋಪಿಗಳು ಮೃತಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡಿದ್ದರೆಂದು ಹೇಳಲಾಗುತ್ತದೆ.ಮೃತಳ ಸಹೋದರನ ವಿವಾಹ ಕಾರ್ಯಕ್ರಮದಲ್ಲಿ ಭಾಗವಹಿಸುವುದಕ್ಕಾಗಿ ಅವಳಿಗೆ ಹಳ್ಳಿಗೆ ಹೋಗುವುದಕ್ಕೆ ಅವರು ಅವಕಾಶ ನೀಡಿರಲಿಲ್ಲ.ತನಿಖಾಧಿಕಾರಿಯೂ ದಾಖಲಿಸಿರುವ ಆರೋಪ ಪಟ್ಟಿಯಲ್ಲಿ ಈ ಎಲ್ಲ ಅಂಶಗಳು ಮತ್ತು ಆರೋಪಿಗಳ ವಿರುದ್ಧ ಮಾಡಿದ ಆರೋಪಗಳು ಕಂಡು ಬರುತ್ತದೆ.ಆದರೆ, ಸೌಮ್ಯ ಕರ್ ದಿನಾಂಕ 19.06.2014 ರಂದು ಕಾಟನ್ ಸೀರೆಯ ತುಂಡಿನಿಂದ ತಾರಸಿ ಫ್ಯಾನಿಗೆ ಸ್ವತಃ ನೇಣು ಬಿಗಿದುಕೊಂಡಿರುತ್ತಾಳೆ.ಅವಳ ಸಾವು ವಿವಾಹದ ದಿನಾಂಕದಿಂದ 7 ವರ್ಷದ ಒಳಗಾಗಿ ಘಟಿಸಿದೆ ಎಂಬುದು ನಿರ್ವಿವಾದ.ಆದರೆ ಈ ಘಟನೆಯು ಬೆಂಗಳೂರಿನ ಮೈಕೋ ಲೇಔಟ್ನಲ್ಲಿ 1 ನೇ ಆರೋಪಿಯು ಇದ್ದ ಬಾಡಿಗೆ ಮನೆಯಲ್ಲಿ ಸಂಭವಿಸಿರುತ್ತದೆ.1 ನೇ ಆರೋಪಿಯು ಟೆಲಿಕಾಂ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿರುತ್ತಾನೆ ಮತ್ತು 3 ನೇ ಆರೋಪಿಯು ಆ್ಯಕ್ಸೆಂಚರ್ನಲ್ಲಿ ಹೆಚ್.ಆರ್. ಆಗಿ ಕೆಲಸ ಮಾಡುತ್ತಿದ್ದು ಸದರಿ ಬಾಡಿಗೆ ಮನೆಯಲ್ಲಿ ಮೃತಳು ಮತ್ತು 1 ನೇ ಆರೋಪಿಯೊಂದಿಗೆ ವಾಸವಾಗಿರುತ್ತಾನೆ. ಮೃತ ಸೌಮ್ಯ ಕರ್ ಅತ್ತೆಯಾಗಿರುವ 2 ನೇ ಆರೋಪಿಯು ಒರಿಸ್ಸಾದಲ್ಲಿ ವಾಸವಾಗಿರುತ್ತಾಳೆ ಹಾಗೂ 4 ನೇ ಆರೋಪಿಯಾದ ಮೃತ ಸೌಮ್ಯ ಕರ್ ಅವಳ ನಾದಿನಿ ಸಹ ಒರಿಸ್ಸಾದಲ್ಲಿ ತನ್ನ ಪೋಷಕರ ಮನೆಯಿಂದ ದೂರದಲ್ಲಿ ವಾಸವಾಗಿದ್ದಳೆಂಬ ಸಂಗತಿಯೂ ಸಹ ನಿರ್ವಿವಾದ.ಹಾಗಾಗಿ ತನಿಖಾಧಿಕಾರಿಯು ಸಲ್ಲಿಸಿದ ಆರೋಪ ಪಟ್ಟಿಯಲ್ಲಿ ಮತ್ತು ವಿವಾಹಿತಳಾದ ಹಾಗೂ ಬೆಂಗಳೂರಿನ ಘಟನೆ ನಡೆದ ಸ್ಥಳದಿಂದ ಸಾಕಷ್ಟು ದೂರದಲ್ಲಿಯೇ ವಾಸವಾಗಿರುವ ಮೃತಳ ಸೋದರ ಸಂಬಂಧಿಯಾದ ದೂರುದಾರಳು ದಾಖಲಿಸಿದ ದೂರಿನಲ್ಲಿ ಮೇಲೆ ಹೇಳಲಾದ ಅಪರಾಧಗಳಿಗೆ ಆರೋಪಿ ವ್ಯಕ್ತಿಗಳೇ ಸಂಪೂರ್ಣ ಹೊಣೆಯಾಗಿರುತ್ತಾರೆ ಎಂಬುದನ್ನು ಸೂಚಿಸಲಾಗಿರುತ್ತದೆ.ದೂರುದಾರಳು, ಮೃತಳ ಸೋದರ ಸಂಬಂಧಿಯಾಗಿದ್ದರೂ, ಅವಳೆಂದೂ 1 ನೇ ಆರೋಪಿಯ ಮನೆಗೆ ಭೇಟಿಯೇ ನೀಡಿರುವುದಿಲ್ಲ ಮತ್ತು 1 ನೇ ಆರೋಪಿಯ ಕುಟುಂಬ ವ್ಯವಹಾರಗಳ ಸಂಬಂಧದಲ್ಲಿ ಅವರಾರನ್ನು ಎಂದೂ ಸಹ ಸಂಪರ್ಕಿಸಿರಲಿಲ್ಲ.ಮೃತಳ ಕುಟುಂಬ ಸದಸ್ಯರು ಮೃತ ಸೌಮ್ಯ ಕರ್ಳಿಗೆ ಆರೋಪಿಗಳು ವರದಕ್ಷಿಣೆಯ ಕಿರುಕುಳವನ್ನು ನೀಡಿದ್ದರೆಂದು ಹೇಳಿಕೆ ನೀಡಿರುವರು.ಆದರೆ ಅವರು ತಮ್ಮ ಹೇಳಿಕೆಯಲ್ಲಿ ಎಲ್ಲಿಯೂ ಮೃತಳಿಗೆ ಅರ್ಜಿದಾರರಾದ/ 2 ನೇ ಮತ್ತು 4 ನೇ ಆರೋಪಿಗಳು 1 ನೇ ಆರೋಪಿಯ ಮುಖಾಂತರ ವರದಕ್ಷಿಣೆಯ ಕಿರುಕುಳ ನೀಡಿರುವರೆಂದು ನಿರ್ದಿಷ್ಟವಾಗಿ ಹೇಳಿಕೆ ನೀಡಿರುವುದಿಲ್ಲ.

6. ತನಿಖೆಯ ಅವಧಿಯಲ್ಲಿ ಮೃತ ಸೌಮ್ಯ ಕರ್ ತಂದೆ-ತಾಯಿಯಾದ ಸತ್ಯಭಾಮ ಮತ್ತು ನಾಗೇಂದ್ರನಾಥಕರ್ ಮತ್ತು ಮೃತಳ ಚಿಕ್ಕಪ್ಪನಾದ ಸತ್ಯನಾರಾಯಣ ಮಹಾಪಾತ್ರ ಮತ್ತು ಮೃತಳ ಸಹೋದರನಾದ ರಾಧ ಬಲ್ಲಕರ್ ಮತ್ತು ದೂರುದಾರಳ ಪತಿಯಾದ ಶಾರದ ಪ್ರಸನ್ನದಾಸ ಇವರುಗಳ ಹೇಳಿಕೆಗಳನ್ನು ದಾಖಲಿಸಿಕೊಳ್ಳಲಾಗಿದೆ ಎಂಬುದನ್ನು ಗಮನಿಸುವುದು ಸೂಕ್ತ.ಇವರೆಲ್ಲರ

ಹೇಳಿಕೆಗಳಲ್ಲಿ, 2 ಮತ್ತು 4 ನೇ ಆರೋಪಿಗಳು ಮೃತಳಿಗೆ ಹೆಚ್ಚಿನ ವರದಕ್ಷಿಣೆ ವಿಷಯಕ್ಕಾಗಿ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರೆಂದು ತಿಳಿದು ಬಂದರೂ, ದೂರುದಾರಳು ಮೃತ ಸೌಮ್ಯ ಕರ್ಳ ಸೋದರ ಸಂಬಂಧಿಯೇ ಆಗಿದ್ದಾಳೆ.

ತನಿಖಾಧಿಕಾರಿಯ ಮುಂದೆ ತಮ್ಮ ಹೇಳಿಕೆಗಳನ್ನು ಮೃತಳನ್ನು ತನ್ನ ತವರಿನಿಂದ ಹೆಚ್ಚಿನ ವರದಕ್ಷಿಣೆ ತರುವುದಕ್ಕಾಗಿ 2 ಮತ್ತು 4 ನೇ ಆರೋಪಿಗಳು ಮೃತಳಿಗೆ ದೈಹಿಕವಾಗಿ ಮತ್ತು ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದರೆಂದು ತಮ್ಮ ಹೇಳಿಕೆಯಲ್ಲಿ ದಾಖಲಿಸಿರುವರು, ಆದರೆ ದಾಖಲೆಯಲ್ಲಿ ಲಭ್ಯವಿರುವ ಇಡೀ ಸಾಕ್ಷ್ಯಾಧಾರಗಳನ್ನು ಹಾಗೂ ತನಿಖಾಧಿಕಾರಿಯು ಮಂಡಿಸಿದ ಆರೋಪ ಪಟ್ಟಿಯನ್ನು ಸಹ ಸ್ಥೂಲವಾಗಿ ಗಮನಿಸಿದಾಗ, ಅದು, 1 ರಿಂದ 20 ರ ವರೆಗಿನ ಮೊಕದ್ದಮೆ ಸಾಕ್ಷಿಗಳ ಹೇಳಿಕೆಗಳನ್ನು ಘಟನೆಯ ಸ್ಥಳದಲ್ಲಿ ಮೃತ ಸೌಮ್ಯ ಕರ್ ಸ್ವತಃ ತಾನು ಆತ್ಮಹತ್ಯೆ ಮಾಡಿಕೊಳ್ಳಲು ತಾರಸಿಯ ಫ್ಯಾನಿಗೆ ನೇಣು ಹಾಕಿಕೊಳ್ಳಲು ಬಳಸಿದಳೆಂದು ಹೇಳಲಾದ ಮತ್ತು ಪಿಎಫ್ನ ಒಳಪಟ್ಟು ಮೃತಳು ಸಾವನ್ನಪ್ಪಿರುತ್ತಾಳೆ ಎಂಬ ಕಾಟನ್ ಸೀರೆಯ ಭಾಗವನ್ನು ಜಪ್ತಿ ಮಾಡುವುದಕ್ಕೆ ಸಂಬಂಧಿಸಿದಂತೆ ಪಂಚರ ಸಮ್ಮುಖದಲ್ಲಿ ನಡೆಸಿದ್ದರೆಂದು ಹೇಳಲಾದ ಮಹಜರ್ನ್ನು ಒಳಗೊಂಡ ಆರೋಪ ಪಟ್ಟಿಯನ್ನು ಒಳಗೊಂಡಿದೆ.1 ನೇ ಆರೋಪಿಯು ಗೌರವಯುತ ಜೀವನ ನಡೆಸುವುದಕ್ಕೆ ಸಾಕಾಗುವಷ್ಟು ಆದಾಯವನ್ನು ಹೊಂದಿದ್ದ.3 ಮತ್ತು 4 ನೇ ಆರೋಪಿಗಳು ಸಹ ಕೆಲಸ ಮಾಡುತ್ತಿದ್ದರು.ಆದುದರಿಂದ, 1 ನೇ ಆರೋಪಿಯ ಕುಟುಂಬ ಸದಸ್ಯರು ಗೌರವಯುತ ಜೀವನ ನಡೆಸುವುದಕ್ಕೆ ಸಮರ್ಪಕ ಆದಾಯವನ್ನು ಹೊಂದಿದ್ದು ಅವನ್ಯಾರು ಈ ಮುಂಚೆ ಯಾರ ಹಣಕ್ಕೂ ಆಸೆ ಪಟ್ಟವರಲ್ಲ.ಆದರೆ 2 ಮತ್ತು 4 ನೇ ಆರೋಪಿಗಳು ಅಪರಾಧ ನಡೆದ ಸ್ಥಳದಿಂದ ಸುಮಾರು 2000 ಕಿ.ಮೀ.ನಷ್ಟು ದೂರದಲ್ಲಿ ವಾಸವಾಗಿರುವರು.ಮೃತ ಸೌಮ್ಯ ಕರ್ ಒರಿಸ್ಸಾದ ತನ್ನ ಪತಿಯ ಮನೆಯಲ್ಲಿ ಒಂದು ತಿಂಗಳು ಮಾತ್ರವೇ ನೆಲೆಸಿದ್ದಳು.ಅವರು ಬೆಂಗಳೂರಿನಲ್ಲಿ ತನ್ನ ಪತಿಯ ಮನೆಯಲ್ಲಿ ತಾರಸಿ ಫ್ಯಾನಿಗೆ ಕಾಟನ್ ಸೀರೆಯ ತುಂಡಿನಿಂದ ಸ್ವತಃ ತಾನೇ ನೇಣು ಬಿಗಿದುಕೊಂಡು ಅತ್ಮಹತ್ಯೆ ಮಾಡಿಕೊಂಡಿರುವಳು.ಈ ಎಲ್ಲ ಅಂಶಗಳು ತನಿಖಾಧಿಕಾರಿ ಸಂಗ್ರಹಿಸಿದ ಸಾಕ್ಷಾಧಾರಗಳಲ್ಲಿ ಪ್ರತಿಬಿಂಬಿತವಾಗಿವೆ.ಮೃತಳ ವಿವಾಹವಾದ ದಿನಾಂಕದಿಂದ 7 ವರ್ಷದ ಅವಧಿಯೊಳಗಾಗಿ ಅವಳ ಸಾವು ಸಂಭವಿಸಿರುತ್ತದೆ.

7. ಪ್ರಸ್ತುತ ಮೊಕದ್ದಮೆಯಲ್ಲಿ ಇಂದು ಜೈನ್ -ವಿರುದ್ಧ-ಮಧ್ಯಪ್ರದೇಶ ಸರ್ಕಾರ ಮತ್ತು ಇತರರು 1 ' ಮೊಕದ್ದಮೆಯಲ್ಲಿ ಘನ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ಣಯವನ್ನು ಅವಲಂಬನೆಯಾಗಿ ತೆಗೆದುಕೊಳ್ಳಲಾಗಿದೆ.ಅದರಲ್ಲಿನ ನಿರ್ಣಯವು ಈ ಕೆಳಗಿನಂತಿದೆ:

" ಆರೋಪಗಳನ್ನು ರೂಪಿಸುವ ಸಮಯದಲ್ಲಿ ಲಘು ಅಧಿವಿಚಾರಣೆ ನಡೆಸುವುದು ಸೂಕ್ತವಲ್ಲ ಅಲ್ಲದೆ ಯುಕ್ತ ಅಧಿವಿಚಾರಣೆ ಅವಧಿಯಲ್ಲಿ ವಿವಿಧ ಸನ್ನಿವೇಶಗಳನ್ನು ಮಾತ್ರ ಪರಿಗಣಿಸಬಹುದೇ ಹೊರತು ಆರೋಪವನ್ನು ರೂಪಿಸುವ ಸಮಯದಲ್ಲಿ ಕಂಡುಬರುವ ಸಂದೇಹಗಳ ಆಧಾರದ ಮೇಲೆ ಪರಿಗಣಿಸಬಾರದು.ಅಧಿವಿಚಾರಣಾ ನ್ಯಾಯಾಲಯವು ಆರೋಪಪಟ್ಟಿಯ ಸತ್ವವನ್ನಾಧರಿಸಿ ಮಾತ್ರ ಅಪರಾಧ ಕೃತ್ಯ ಎಸಗಿರುವ ಬಗ್ಗೆ ಮೇಲ್ನೋಟದ ಸಮ್ಮತಿಗೆ ಬರಬೇಕಾಗುತ್ತದೆ ಎಂದು ಅಭಿಪ್ರಾಯಪಡಲಾಗಿದೆ '

ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿ, 2 ಮತ್ತು 4 ನೇ ಆರೋಪಿಗಳು ಮೃತ ಸೌಮ್ಯ ಕರ್ಳ ಅತ್ತೆ ಹಾಗೂ ನಾದಿನಿಯಾಗಿದ್ದು, ಆರೋಪಿತ ಅಪರಾಧದಲ್ಲಿ ಅವರನ್ನು ಎಳೆದು ತರಲಾಗಿದೆಯಲ್ಲದೆ, ತನಿಖಾಧಿಕಾರಿಯು ಆರೋಪಪಟ್ಟಿಯಲ್ಲಿ ಮಂಡಿಸಿದ ಅಂಶಗಳಲ್ಲೂ ಸಹ ಸೇರಿಸಲಾಗಿದೆ.ತನಿಖಾಧಿಕಾರಿಯು ಹಾಜರುಪಡಿಸಿದ ಸಾಕ್ಷ್ಯಾಧಾರಗಳನ್ನು ವಿವೇಚಿಸುವ ಮೂಲಕ ಆರೋಪಗಳನ್ನು ರೂಪಿಸುವ ಹಂತದಲ್ಲಿ ಲಘು ವಿಚಾರಣೆಯನ್ನು ನಡೆಸಿರುವುದು ಸಮರ್ಥನೀಯವಾಗಿಲ್ಲ.ಆರೋಪ ಪಟ್ಟಿಯನ್ನು ರೂಪಿಸುವ ಸಮಯದಲ್ಲಿ ಅಧಿವಿಚಾರಣಾ ನ್ಯಾಯಾಲಯವು ದಾಖಲೆಯಲ್ಲಿರುವ ಸಾಕ್ಷಾಧಾರಗಳನ್ನು ಅಣಿಗೊಳಿಸುವ ಅಗತ್ಯವಿಲ್ಲ.ಆದರೆ,

ಅಧಿವಿಚಾರಣೆಯನ್ನು ನಡೆಸುವ ಸಲುವಾಗಿ ಮೊಕದ್ದಮೆಯನ್ನು ಮುನ್ನಡೆಸಲು ಆಪಾದಿತರ ವಿರುದ್ಧ ಸಮರ್ಪಕವಾದ ಸಾಕ್ಷ್ಯಾಧಾರಗಳಿವೇ ಎಂಬುದನ್ನು ಮೇಲ್ನೋಟಕ್ಕೆ ಪರಿಗಣಿಸುವ

1. (2009) 3 ಎಸ್ಸಿಸಿ (ಕ್ರೈಮ್ಸ್) 996

ಅಗತ್ಯವಿದೆ.ಆದರೆ, ಪ್ರಸ್ತುತ ಮೊಕದ್ದಮೆಯಲ್ಲಿ ತನಿಖಾಧಿಕಾರಿಯು ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳು ದಂಡ ಪ್ರಕ್ರಿಯಾ ಸಂಹಿತೆಯ 173 ನೇ ಪ್ರಕರಣದ ಅಡಿಯಲ್ಲಿ ಉದ್ದೇಶಿಸಿದಂತೆಯೇ ಆರೋಪ ಪಟ್ಟಿಯನ್ನು ಮಂಡಿಸುವ ಸಲುವಾಗಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ಸ್ಥೂಲವಾಗಿ ಗಮನಿಸಿದಾಗ ದೂರುದಾರಳು ಮೃತ ಸೌಮ್ಯ ಕರ್ಳ ಸೋದರ ಸಂಬಂಧಿಯಾಗಿರುತ್ತಾಳೆ ಮತ್ತು ಅವಳು ಅಪರಾಧ ನಡೆದ ಸ್ಥಳದಿಂದ ತುಂಬಾ ದೂರದಲ್ಲಿರುವ ಗಂಡನ ಮನೆಯಲ್ಲಿ ವಾಸಿಸುತ್ತಿರುತ್ತಾಳೆ.ದೂರಿನಲ್ಲಿ ಮಾಡಿದ ಆರೋಪಗಳು ಹಾಗೂ ಆರೋಪ ಪಟ್ಟಿಯಲ್ಲಿನ ವಿಷಯ ಏನೇ ಇರಲಿ, ಪ್ರಾಸಿಕ್ಯೂಷನ್ ವಿಚಾರಣೆ ನಡೆಸುವ ಅವಧಿಯಲ್ಲಿ ಅದೆಲ್ಲವನ್ನು ಗಮನಕ್ಕೆ ತಂದುಕೊಳ್ಳಬೇಕಾಗಿದೆ ಮತ್ತು ಪ್ರಾಸಿಕ್ಯೂಷನ್ನೆ ಬಲವಾದ ಸಾಕ್ಷ್ಯವನ್ನು ಮತ್ತು ಆರೋಪಿಗಳ ವಿರುದ್ಧ ಹೊರಿಸಲಾದ ಆರೋಪಗಳಿಗೆ ಸಂಬಂಧಿಸಿದಂತೆ ಅಪರಾಧ ನಿರ್ಣಯವನ್ನು ಸುನಿಶ್ಚಿತ ಪಡಿಸುವುದಕ್ಕೆ ಎಲ್ಲ ಯುಕ್ತ ಸಂದೇಹಗಳನ್ನು ಮೀರಿದ ಸಾಕ್ಷ್ಯವನ್ನು ಹಾಜರುಪಡಿಸಬೇಕಾಗುತ್ತದೆ.ಆದರೆ 2 ಮತ್ತು 4 ನೇ ಆರೋಪಿಗಳು ಮೃತ ಸೌಮ್ಯ ಕರ್ಳ ಅತ್ತೆ ಹಾಗೂ ನಾದಿನಿಯಾಗಿರುವ ಕಾರಣದಿಂದಲೇ ಅವರುಗಳನ್ನು ಆರೋಪಪಟ್ಟಿಯಲ್ಲಿ ಎಳೆತರಲಾಗಿದೆ.ಅವರು ವಿಚಾರಣೆಯನ್ನು ಎದುರಿಸಬೇಕಾಗಿದೆ.ಅಲ್ಲದೆ ತನಿಖಾಧಿಕಾರಿಯು ಈ ಆರೋಪಿಗಳು ಮೃತ ಸೌಮ್ಯ ಕರ್ಳಿಗೆ ದೈಹಿಕ ಮತ್ತು ಮಾನಸಿಕ ಕಿರುಕುಳ ನೀಡಿದ್ದರಿಂದ ಅವಳು ತನ್ನ ವಿವಾಹವಾದ ದಿನಾಂಕದಿಂದ 7 ವರ್ಷ ಅವಧಿಯೊಳಗಾಗಿ ತನ್ನ ಗಂಡನ ಮನೆಯಲ್ಲಿ ಕಾಟನ್ ಸೀರೆಯ ತುಂಡಿನಿಂದ ತಾರಸಿಯ ಫ್ಯಾನಿಗೆ ನೇಣು ಬಿಗಿದುಕೊಂಡು ಸಾವನ್ನಪ್ಪಿದಳೆಂದು ಭಾರತ ದಂಡ ಸಂಹಿತೆಯ 498 ( ಎ) ಪ್ರಕರಣದ ಅಡಿಯಲ್ಲಿನ ಆರೋಪಗಳಿಗೆ ಸಂಬಂಧಿಸಿ ತನಿಖಾಧಿಕಾರಿಯು ಸಂಗ್ರಹಿಸಿದ ಸಾಕ್ಷ್ಯಾಧಾರಗಳನ್ನು ಅವಲೋಕಿಸಿದಾಗ, ಆರೋಪಿಗಳ ವಿರುದ್ಧ ಆರೋಪ ಪಟ್ಟಿ ಸಲ್ಲಿಸಿದ ಮಾತ್ರಕ್ಕಾಗಿಯೇ ಈ ಆರೋಪಿಗಳು ವಿಚಾರಣೆ ಎದುರಿಸಬೇಕಾಗಿತ್ತೆಂದು ಹೇಳಲು ಸಾಧ್ಯವಿಲ್ಲ, ಆದರೆ, ತನಿಖಾಧಿಕಾರಿಯು ಸಂಗ್ರಹಿಸಿರುವ ಸಾಕ್ಷ್ಯಾಧಾರಗಳು, ಅವಕಾಶವಿಲ್ಲದಿರುವ ಸಾಧ್ಯತೆಗಳಲ್ಲೂ, ಮೃತ ಸೌಮ್ಯ ಕರ್ ಪತಿಯೂ ಆಗಿರುವ 1 ನೇ ಆರೋಪಿಯು ವಿಚಾರಣೆ ಎದುರಿಸಲು ಸಾಕಾಗುವಷ್ಟು ಮಾತ್ರ ಇದೆ.

8. ಮೃತ ಸೌಮ್ಯ ಕರ್ ಅತ್ತೆಯಾದ 2 ನೇ ಆರೋಪಿ ಮತ್ತು ನಾದಿನಿಯಾದ 4 ನೇ ಆರೋಪಿಯೂ ಒರಿಸ್ಸಾದಲ್ಲಿ ವಾಸವಾಗಿರುತ್ತಾರೆ.ಅದರಂತೆಯೇ 3 ನೇ ಆರೋಪಿಯು ಮೃತ ಸೌಮ್ಯ ಕರ್ಳ ಮೈದುನನಾಗಿದ್ದು, ಅವನು ತನ್ನ ಸಹೋದರನಾದ 1 ನೇ ಆರೋಪಿಯ ಮನೆಯಲ್ಲಿಯೇ ವಾಸವಾಗಿರುತ್ತಾನೆ.ಈ ಕಾರಣದಿಂದಲೇ 2 ನೇ ಮತ್ತು 4 ನೇ ಆರೋಪಿಗಳ ವಿರುದ್ಧ ಎಂದರೆ ಇದರಲ್ಲಿನ ಅರ್ಜಿದಾರ ವಿರುದ್ಧ ಆರೋಪ ಪಟ್ಟಿಯನ್ನು ಸಲ್ಲಿಸುವ ಸಲುವಾಗಿ ತನಿಖಾಧಿಕಾರಿಯು ತನಿಖೆಯ ಅವಧಿಯಲ್ಲಿ ಸಂಗ್ರಹಿಸಿದ ಸಾಕ್ಷ್ಯಾಧಾರಗಳಲ್ಲಿ ಅವರ ವಿರುದ್ಧ ಬಲವಾದ ಸಾಕ್ಷ್ಯಾಧಾರ ಇರುವುದಿಲ್ಲ.ಅಲ್ಲದೆ, 2 ನೇ ಮತ್ತು 4 ನೇ ಆರೋಪಿಗಳು ತಪ್ಪಿತಸ್ಥರೆಂದು ರುಜುವಾತು ಪಡಿಸುವುದಕ್ಕೂ ಸಹ ಪ್ರಾಸಿಕ್ಯೂಷನ್ನೆ ಯಾವುದೇ ಸಾಧ್ಯತೆ ಇಲ್ಲ.

ಆದರೆ ಅಪರಾಧ ನ್ಯಾಯ ವ್ಯವಸ್ಥೆಯ ಸಿದ್ಧಾಂತದಲ್ಲಿ ಮೊಕದ್ದಮೆಯನ್ನು ಎಲ್ಲ ಯುಕ್ತ ಸಂದೇಹಗಳನ್ನು ಮೀರಿ ರುಜುವಾತುಪಡಿಸಬೇಕಾದುದು ಪ್ರಧಾನವಾದ ತತ್ವವಾಗಿದೆ.ಆದುದರಿಂದ ಮೇಲೆ ಹೇಳಲಾದ ಕಾರಣಗಳಲ್ಲಿ ಮತ್ತು ನಿರ್ಣಯಗಳ ಹಿನ್ನೆಲೆಯಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ಆರೋಪದಿಂದ ಮುಕ್ತಗೊಳಿಸುವಂತೆ ಕೋರಿ ಸಲ್ಲಿಸಿದ ತಮ್ಮ ಅರ್ಜಿಯನ್ನು ತಿರಸ್ಕರಿಸಿರುವುದರಿಂದ ದಾಖಲಿಸಿದ ಪುನರೀಕ್ಷಣಾ ಅರ್ಜಿಯನ್ನು ಎನ್.ಸಿ.ಸಂಖ್ಯೆ:1123/2014 ರಲ್ಲಿ ಅಧೀನ ನ್ಯಾಯಾಲಯವು ಹೊರಡಿಸಿದ ಈ ಪುನರೀಕ್ಷಣಾ

ಅರ್ಜಿಯಲ್ಲಿ 2 ನೇ ಮತ್ತು 4 ನೇ ಆರೋಪಿಗಳೆಂದು ಹೆಸರಿಸಲಾದ ಮಾನ್ಯ ನ್ಯಾಯವಾದಿಗಳ ವಾದವು ಸತ್ವಪೂರ್ಣವಾಗಿದೆ ಎಂಬ ಪರಿಗಣಿತ ಅಭಿಪ್ರಾಯಕ್ಕೆ ನಾನು ಬರುತ್ತೇನೆ ಹಾಗೂ ತದನುಸಾರವಾಗಿ ಈ ಮುಂದಿನ ಆದೇಶವನ್ನು ನೀಡಲಾಗಿದೆ.

## ಆಜ್ಞೆ

ಅರ್ಜಿದಾರರು/ 2 ಮತ್ತು 4 ನೇ ಆರೋಪಿಗಳು ದಂಡ ಪ್ರಕ್ರಿಯಾ ಸಂಹಿತೆಯ 401 ನೇ ಪ್ರಕರಣದೊಂದಿಗೆ ಓದಲಾದ 397 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ.ತತ್ಪರಿಣಾಮವಾಗಿ, ಅಧಿವಿಚಾರಣಾ ನ್ಯಾಯಾಲಯವು ಎಸ್.ಸಿ.ಸಂಖ್ಯೆ:1123/2014,ದಿನಾಂಕ: 5.9.2015 ರಲ್ಲಿ ಹೊರಡಿಸಿದ ಆದೇಶವನ್ನು ವಜಾಗೊಳಿಸಲಾಗಿದೆ.

ಈ ಕ್ರಿಮಿನಲ್ ಪುನರೀಕ್ಷಣಾ ಅರ್ಜಿಯನ್ನು ಪುರಸ್ಕರಿಸಿದ ಪರಿಣಾಮವಾಗಿ, ಅರ್ಜಿದಾರರು 2 ಮತ್ತು 4 ನೇ ಆರೋಪಿಗಳು ದಂಡ ಪ್ರಕ್ರಿಯಾ ಸಂಹಿತೆಯ 227 ನೇ ಪ್ರಕರಣದ ಅಡಿಯಲ್ಲಿ ದಾಖಲಿಸಿದ ಅರ್ಜಿಯನ್ನು ಈ ಮೂಲಕ ಪುರಸ್ಕರಿಸಲಾಗಿದೆ ಮತ್ತು ಅವರ ವಿರುದ್ಧ ತನಿಖಾಧಿಕಾರಿಯು ಮಂಡಿಸಿದ ಆರೋಪ ಪಟ್ಟಿಯಲ್ಲಿ ಹೇಳಲಾದಂತಹ ಆರೋಪಿತ ಅಪರಾಧಗಳಿಂದ ಅವರನ್ನು ಮುಕ್ತಗೊಳಿಸಲಾಗಿದೆ.

ಈ ಆದೇಶದಲ್ಲಿ ಏನೇ ಅಭಿಪ್ರಾಯಗಳನ್ನು ನೀಡಿದ್ದರೂ, ಅದು 1 ಮತ್ತು 3 ನೇ ಆರೋಪಿಗಳು ವಿಚಾರಣೆಯನ್ನು ಎದುರಿಸುವುದಕ್ಕೆ ಸಂಬಂಧಿಸಿದಂತೆ ಎಸ್.ಸಿ.ಸಂಖ್ಯೆ:1123/2014 ರಲ್ಲಿನ ಅಧಿವಿಚಾರಣಾ ನ್ಯಾಯಾಲಯದ ಮೇಲೆ ಯಾವುದೇ ಪ್ರಭಾವವನ್ನು ಬೀರತಕ್ಕದ್ದಲ್ಲ.

ಮುಖ್ಯ ಅರ್ಜಿಯನ್ನು ವಿಲೆ ಮಾಡಿದ ಪರಿಣಾಮವಾಗಿ, ತಡೆಯಾಜ್ಞೆ ಕೋರಿ ಸಲ್ಲಿಸಿದ ಐ.ಎ.ಸಂಖ್ಯೆ:1/2016 ಪರಿಗಣನೆಗೆ ಊರ್ಜಿತವಾಗುವುದಿಲ್ಲ.ತದನುಸಾರವಾಗಿ ಅದು ತಿರಸ್ಕೃತವಾಗುತ್ತದೆ.